# ಮಹಿಷಿಯ ಮಹಾಮಹಿಮರು - ಶ್ರೀ ಸತ್ಯಸಂಧ ತೀರ್ಥರು



ಮಧ್ವಸಿದ್ಧಾಂತದ ಪರಂಪರೆಯ ಶ್ರೀ ಉತ್ತರಾಧಿ ಮಠದ ಯತಿಪರಂಪರೆಯಲ್ಲಿ ಮೇರುಶಿಖರರಾದ ಸಪ್ತರ್ಷಿಗಳಲ್ಲಿ ಒಬ್ಬರಾದ ಶ್ರೀ ಸತ್ಯಸಂಧ ಸೂರ್ಯ ಎಂದೇ ಪ್ರಸಿದ್ಧರಾದ ಮಹಿಷಿ ಕ್ಷೇತ್ರದಲ್ಲಿ ನಿತ್ಯವಾಸಿಪರಾದ ಶ್ರೀ ಶ್ರೀ ಸತ್ಯಸಂಧ ತೀರ್ಥರ ಆರಾಧನಾ ಮಹೋತ್ಸವ.

ವಿಷ್ಣೋ: ಪದಶ್ರಿದ್ಪೋವ್ರಾತ್ಯೈ: ಸ್ವಾಂತಧ್ವಾಂತನಿವಾರಕ: |

ಶ್ರೀಸತ್ಯಸಂಧಸೂರ್ಯೋ ಯಂ ಭಾಸತಾಂ ನೋ ಹೃದಂಬರೇ ||

ವಿಷ್ಣುಸ್ತುತಿ ಕರ್ತರಾದ ಶ್ರೀ ಸತ್ಯಸಂದ ತೀರ್ಥರ ಮಹಿಮೆ ಮತ್ತು ಅವರ ಬಗ್ಗೆ ತಿಳಿಯಬಹುದಾದ ಗ್ರಂಥವೇ ಶ್ರೀ ಎಲಗೂರು ಅನಂತಾಚಾರ್ಯ ವಿರಚಿತ "ಶ್ರೀ ಸತ್ಯ ಸಂಧ ವಿಜಯ" ಅವರ ಕೆಲವೊಂದು ಮಹಿಮೆಗಳ ತಿಳಿಯುವ ಪ್ರಯತ್ನ ಮಾಡೋಣ.

ಪೂರ್ವಾಶ್ರಮ ನಾಮ : ಹಾವೇರಿ ರಾಮಚಂದ್ರಚಾರ್ಯ ಮತ್ತು ರಾಘವೇಂದ್ರ ಚಾರ್ಯ ಎಂಬ ಎರಡು ಹೆಸರು ಇದೆ.

**ಆಶ್ರಮ ಗುರುಗಳು : ಶ್ರೀ ಸತ್ಯಬೋಧ ತೀರ್ಥರು**

**ಆಶ್ರಮ ಶಿಷ್ಯರು : ಶ್ರೀ ಸತ್ಯವರ ತೀರ್ಥರು**

**ವೃಂದಾವನ ಸ್ಥಳ : ಮಹಿಷಿ ಕ್ಷೇತ್ರ, ತೀರ್ಥ ಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.**

**ವೇದಾಂತ ಸಾಮ್ರಾಜ್ಯ ಆಳ್ವಿಕೆ : 1783 ರಿಂದ 1794**

ವೃಂದಾವನ ಕ್ಷೇತ್ರ ವಿಶೇಷ : ಶ್ರೀರಾಮದೇವರು ತನ್ನ ಪತ್ನಿಯಾದ ಸೀತಾದೇವಿಯ ಅನ್ವೇಷಣೆ ಕಾರ್ಯದಲ್ಲಿ ಈ ಕ್ಷೇತ್ರಕ್ಕೆ ಬಂದಿದ್ದರು ಮತ್ತು ಹನುಮಂತ ದೇವರು ಅಶ್ವಥ ವೃಕ್ಷ ಮತ್ತು ಅಶ್ವಥ ನಾರಾಯಣ ದೇವರನ್ನು ಪ್ರತಿಷ್ಠೆ ಮಾಡಿದ್ದರು. ಮುಂದೆ ಅಶ್ವಥ ನಾರಸಿಂಹದೇವರ ಕ್ಷೇತ್ರ ಎಂದೇ ಪ್ರಸಿದ್ಧ ವಾಯಿತು. ಪವಿತ್ರ ತುಂಗಾನದಿಯ ಸನ್ನಿದಿ ಮತ್ತು ಪ್ರಕೃತಿ ಸೌಂದರ್ಯದ ವಿಶೇಷ ಸಾನಿಧ್ಯ ಇಲ್ಲಿದೆ.

## ಶ್ರೀ ರಾಮಾಚಾರ್ಯರ ಜನನ

ಶ್ರೀ ರಾಮಾಚಾರ್ಯರ ತಂದೆ ತಾಯಿಗಳಿಗೆ ಬಹುಕಾಲ ಮಕ್ಕಳಿರಲಿಲ್ಲ, ಹಾಗೆ ಅವರು ರಾಯರ ಭಕ್ತರಾಗಿದ್ದರು. ಆದರೆ ಆಗಿನ ಕಾಲದಲ್ಲಿ ಮಂತ್ರಾಲಯಕ್ಕೆ ಹೋಗಬೇಕಾದರೆ ಕನಿಷ್ಠ ಏಳು ದಿನ ನಡೆದೇ ಹೋಗಬೇಕಾಗಿತ್ತು. ಅಷ್ಟು ಅನುಕೂಲಗಳು ಇರಲಿಲ್ಲ. ತಂದೆ ತಾಯಿಯರು ಅಲ್ಲೇ ಹತ್ತಿರದಲ್ಲಿದ್ದ ಬಿದರಹಳ್ಳಿ ಯಲ್ಲಿ ಶ್ರೀ ಶ್ರೀನಿವಾಸ ತೀರ್ಥರಿಂದ ಪ್ರತಿಷ್ಠಿತರಾದ ಶ್ರೀ ಅಶ್ವತ್ಥ ನಾರಾಯಣನ ಸೇವೆಯನ್ನು ಏಳು ದಿನಗಳ ಕಾಲ ಮಾಡಿದರು. ಮರುದಿನ ಬೆಳಗ್ಗೆಯೇ ಸ್ವಪ್ನವೇಂಬತ್ತೆ ರಾಯರೇ ನಿಜವಾಗಿ ಬಂದು ಇವರಿಗೆ ಒಂದು ಮಾವಿನ ಹಣ್ಣು ಮತ್ತು ಮಂತ್ರಾಕ್ಷತೆಯನ್ನು ಕೊಟ್ಟರು. ಅದು ನಿಜವೇ ಆಗಿತ್ತು. ಸ್ವಲ್ಪ ದಿನಗಳಲ್ಲಿ ಆಕೆ ಗರ್ಭವತಿ ಯಾದಳು. ಸಾಮಾನ್ಯ ಹೆಂಗಸರಂತೇ ಅವಳ ಬಯಕೆಗಳು ಇರಲಿಲ್ಲ. ಅವಳ ಬಯಕೆ ವಿಶೇಷವೇ ಆಗಿತ್ತು. ಒಂದು ದಿನ ಕಾಶಿಯಲ್ಲಿ ಸ್ನಾನ ಮಾಡಬೇಕು, ಮತ್ತೊಂದು ದಿನ ಲಕ್ಷ ಬ್ರಾಹ್ಮಣರಿಗೆ ಊಟ ಹಾಕಬೇಕು. ತಾವು ಉಪಯೋಗಿಸುತ್ತಿದ್ದ ಮಡಿಕೋಲು ಮಾಡಿ ದಂಡ ನಮಸ್ಕಾರದ ರೀತಿ ಮಾಡುತ್ತಿದ್ದರು. ಅವರ ತಂದೆಗೆ ತಿಳಿದಿತ್ತು ಇದು ಇವಳ ಬಯಕೆಅಲ್ಲ ಇವಳ ಒಳಗಿರುವ ಪುತ್ರನ ಬಯಕೆ. ಹಾಗೆ ಒಂದು ದಿನ ಸತ್ಪುತ್ರ ಜನಿಸಿದ, ಬಾಲ್ಯದಲ್ಲೇ ಪೂರ್ಣಚಂದ್ರನ ಹಾಗೆ ಬೆಳೆಯುತ್ತಿದ್ದರು. ನಂತರ ಪಾಠಗಳಲ್ಲಿ ತಮ್ಮ ತಂದೆಯವರೇ ಪಾಠ ಮಾಡುತ್ತಿದ್ದರು, ಕೇವಲ ಒಂದು ಸಲ ಹೇಳಿದರೆ ಅದೇ ಮುಖಖರಗತವಾಗುತ್ತಿತ್ತು. ಜೊತೆಗೆ ಸುಧಾಪಾಠವಾಗುತಿತ್ತು. ಹಾವೇರಿ ರಾಮಾಚಾರ್ಯರು ಪೂರ್ವಾಶ್ರಮದಲ್ಲೇ ಮಧ್ವಶಾಸ್ತ್ರ, ಸುಧಾ ಪಂಡಿತರಾದರು. ಒಮ್ಮೆ ರಾಮಾಚಾರ್ಯರಿಗೆ ಮದುವೆ ಮಾಡಬೇಕು ಎಂದು ತಂದೆತಾಯಿಗಳು ನಿರ್ಧರಿಸಿ ಶ್ರೀ ಸತ್ಯಬೋಧ ತೀರ್ಥರಲ್ಲಿ ಮಂತ್ರಾಕ್ಷತೆ ಪಡೆಯಲು ಸವಣೂರಿಗೆ ಹೋದರು. ಅಂದು ಇನ್ನು ಪೂಜೆ ಪ್ರಾರಂಭವಾಗಿರಲಿಲ್ಲ ಬಾಲಕ ರಾಮಾಚಾರ್ಯನ್ನು ಶ್ರೀ ಸತ್ಯಬೋಧ ತೀರ್ಥರು ಕೇಳಿದರು. ತಾವು ಏನು ಅಧ್ಯಯನ ಮಾಡಿದ್ದೀರಾ ಎಂದು ಆದರೆ ಶ್ರೀ ರಾಮಾಚಾರ್ಯರು ಸಂಕೋಚಗೊಂಡು ಇನ್ನು ಸುಧಾ ಅಧ್ಯಯನ ಮಾಡುತ್ತಿದ್ದೇನೆ ಎಂದು ಹೇಳಿದರು. ಆದರೆ ಅವರ ಮುಖದಲ್ಲಿ ವರ್ಚಸ್ಸು ಹೆಚ್ಚಿದ್ದನ್ನು ನೋಡಿ ಶ್ರೀ ರಾಮಾಚಾರ್ಯರಿಗೆ ಸುಧೆಯ ಅನುವಾದ ಮಾಡಲು ಹೇಳಿದರು. ಇವರ ಬಾಯಿಂದ ಹೊರಹೊಮ್ಮಿದ ಎರಡು ಪಂಕ್ತಿಗಳ ಸುಧಾನುವಾದ ಘಂಟೆಗಟ್ಟಲೆ ಹೊರಹೊಮ್ಮಿತು. ಮಠದ ದಿವಾನರು ಬಂದು ಶ್ರೀ ಸತ್ಯಬೋಧ ತೀರ್ಥರಲ್ಲಿ ಈಗಾಗಲೇ ಗಂಟೆ ಮಧ್ಯಾನ್ಹ ಒಂದು ವರೆ ಆಗುತ್ತಿದೆ ರಾಮದೇವರ ಪೂಜೆಗೆ ತಡವಾಗುತ್ತಿದೆ ಎಂದು ಹೇಳಿದಾಗ ಇವರ ಅನುವಾದ ನಿಲ್ಲಿಸಿದರಂತೆ. ಶ್ರೀ ಸತ್ಯಬೋಧ ತೀರ್ಥರು ಸಂತಸಗೊಂಡು ಇವರಿಗೆ ಹರಿಸಿದರು. ನಂತರ ಇವರನ್ನು ಆಲಿಂಗನ ಮಾಡಿಕೊಂಡಿರಂತೆ, ನಂತರ ಇವರಿಗೆ ವ್ಯಾಕರಣತರ್ಕ ವಿಶೇಷ ಪಾಠಗಳನ್ನು ಮಠದಲ್ಲೇ ಇಟ್ಟುಕೊಂಡು ಮಾಡಿದರಂತೆ.

## ಪೂರ್ವಾಶ್ರಮ

ಮುಂದೆ ಸತ್ಯಬೋಧ ತೀರ್ಥರ ಪೂರ್ವಾಶ್ರಮದ ಮಗನಾದ ಶ್ರೀ ಸೇತುಮಾಧವ ಚಾರ್ಯರ ಪುತ್ರಿಯಾದ ಸುಕನ್ಯಾ ಎಂಬ ವದುವುನೊಂದಿಗೆ ಮದುವೆ ಮಾಡಿದರು. ಶ್ರೀ ರಾಮಾಚಾರ್ಯರಿಗೆ ಒಂದು ಗಂಡು ಮಗು ಆಯಿತು ಅವರೇ ಸ್ವಾಮಿಚಾರ್ಯರು ಎಂದು ಹೆಸರಾದರು. ನಂತರ ಇನ್ನೊಂದು ಮಗುವಿನ ಗರ್ಭಿಣಿ ಆ ಸಮಯದಲ್ಲಿ ಶ್ರೀ ಸತ್ಯಬೋಧ ತೀರ್ಥರಿಗೆ ಸ್ವಲ್ಪ ದೇಹಾಲಾಸ್ಯ ವಾಗಿ ಮುಂದೆ ಪೀಠವನ್ನು ಯಾರಿಗೆ ಕೊಡಬೇಕು ಎಂದು ಯೋಚಿಸುತ್ತಿರಲು ಆಗಿನ ಕಾಲದಲ್ಲಿ ಪ್ರಕಾಂಡ ಪಂಡಿತರು ಇದ್ದರು, ಹರಿ ಸಂಕಲ್ಪದಂತೆ ಶ್ರೀ ರಾಮಚಾರ್ಯರಿಗೆ ಆಶ್ರಮ ಕೊಡಬೇಕು ಎಂದು ನಿರ್ಧರಿಸಿದರು. ಮನೆಯಲ್ಲಿ ರಾಮಾಚಾರ್ಯರು ಆಶ್ರಮ ಸ್ವೀಕಾರದ ವಿಷಯ ತಿಳಿಸಲು ತಂದೆ ಒಪ್ಪಿದರು ತಾಯಿ ಒಪ್ಪಲಿಲ್ಲ, ಈಗಾಗಲೇ ಮದುವೆಯಾಗಿದೆ, ಇನ್ನು ಪತ್ನಿ ಗರ್ಭಿಣಿ, ಬೇಡವೆಂದು ಹಠ ಮಾಡಿದರು. ಆದರೆ ಸತ್ಯಭೋದ ತೀರ್ಥರ ಸಂಕಲ್ಪ ಮತ್ತು ಹರಿಯಾಜ್ಞೆಯಂತೆ ಸನ್ಯಾಸಶ್ರಮ ಸ್ವೀಕಾರಾ ಮಾಡಲು ಬಂದರು.

## ಆಯುಷ್ಯ ದಾನ

ಶ್ರೀ ಸತ್ಯಬೋಧ ತೀರ್ಥರು ರಾಮಾಚಾರ್ಯರ ಮುಖವನ್ನು ನೋಡಲು ಅವರಿಗೆ ಆಯುಷ್ಯವೇ ಇರಲಿಲ್ಲ. ಗಾಬರಿಯಾಯಿತು ಆದರೂ ಮೂಲರಾಮನಲ್ಲಿ ಪ್ರಾರ್ಥಿಸಿ ಆಶ್ರಮ ಸ್ವೀಕಾರದ ದಿನವನನ್ನು ಮುಂದೆ ಹಾಕಿ, ರಾಮಾಚಾರ್ಯರಿಗೆ ಪ್ರತಿದಿನ ಬೆಳಗ್ಗೆ ನಾಲ್ಕುವರೆ ಗೆ ಬರಲು ಹೇಳಿದರು. ಪ್ರತಿದಿನ ಒಂದು ಬಟ್ಟಲಿನಲ್ಲಿ ತುಪ್ಪವನ್ನು ಅಭಿಮಂತ್ರಿಸಿ ತಮ್ಮ ಆಯುಷ್ಯವನ್ನು ತುಂಬಿ ಅವರಿಗೆ ಸ್ವೀಕಾರ ಮಾಡಲು ಹೇಳಿದರು. ಹೀಗೆ ಹತ್ತುದಿನ ಸ್ವೀಕಾರ ಮಾಡಿ ಹನ್ನೊಂದನೇ ದಿನ ಸ್ವಲ್ಪ ಕೈಜಾರಿ ತುಪ್ಪ ಕೆಳಗೆ ಬೀಳಲು ಅರ್ಧ ಬಟ್ಟಲು ಮಾತ್ರ ಉಳಿಯಿತು.ಹೀಗೆ ಹತ್ತುವರೆವರ್ಷಗಳ ಹೆಚ್ಚಿನ ಆಯುಷ್ಯ ಪ್ರಧಾನ ಮಾಡಿ  ಶ್ರೀ ಸತ್ಯಭೋಧ ತೀರ್ಥರು ಹರಿಯಿಚ್ಚೆ ಇಷ್ಟೇ ಎಂದು ತಿಳಿದು ಮುಂದೆ ಅವರಿಗೆ ಸನ್ಯಾಸಾಶ್ರಮ ಕೊಟ್ಟರು.

## ಸನ್ಯಾಸಾಶ್ರಮ ಸ್ವೀಕಾರ

ರಾಮಾಚಾರ್ಯರಿಗೆ ಏನೆಂದು ಹೇಳಲು ಗೊತ್ತಾಗದೆ ಅವರು ಮಾಡಿದ ಅನುಗ್ರಹವನ್ನು ಸ್ಮರಿಸಿ ಆಶ್ರಮಸ್ವೀಕಾರದ ನಂತರ ತಮ್ಮ ಗುರುಗಳನ್ನು ಅನುಕ್ಷಣ ಸ್ಮರಿಸಿ ತಮ್ಮ ಗ್ರಂಥಗಳಲ್ಲೂ ಅವರ ಸ್ಮರಣೆ ಮಾಡಿದ್ದಾರೆ. ಸನ್ಯಾಸಾಶ್ರಮದ ನಂತರ 12  ದಿನ ಮಾತ್ರ ಸತ್ಯಬೋಧ ತೀರ್ಥರು ಇದ್ದು ನಂತರ ಹರಿಪಾದವನ್ನು ಸೇರಿದರು. ಅವರ ಬೃಂದಾವನ ನಿರ್ಮಾಣಮಾಡಿ ಅಲ್ಲಿಂದ ಶೂರ್ಪಾಲಯಕ್ಕೆ ಬಂದು ಅಲ್ಲಿ ಗುರುಗಳ ಮಹಾಸಮಾರಾಧನೆ ಮಾಡುತ್ತಾರೆ. ಬಂದ ಬ್ರಾಹ್ಮಣರಿಗೆ ರಜತ ಪಾತ್ರೆಗಳ ಧಾನಮಾಡಿ ಬಹು ವೈಭವದಿಂದ ಗುರುಗಳ ಸಮಾರಾಧನೆ ಮಾಡುತ್ತಾರೆ. ಅಲ್ಲಿಂದ ಮುಂದೆ ಸತ್ತಿ ಗ್ರಾಮಕ್ಕೆ ಬಂದು ಛಾಂದೋಘ್ಯ ಭಾಷ್ಯದ ಪಾಠ ಮಾಡಿ ಬಹುದಿನಗಳು ಅಲ್ಲಿದ್ದು ಅಲ್ಲಿನ ಜನರಿಗೆ ವಾಯುದೇವರ ದರ್ಶನ ಮಾಡಿಸುತ್ತಾರೆ. ಅಲ್ಲಿಂದ ಮಿರಾಜ್ ಗೆ ಬಂದು ಅಲ್ಲಿ ದಾದಾಶಾಸ್ತ್ರಿಗಳು ಪ್ರಕಾಂಡ ಅದ್ವೈತ ಪಂಡಿತರು ಅವರು ಶ್ರೀ ಸತ್ಯಸಂದ ತೀರ್ಥರಲ್ಲಿ ವಾಕ್ಯಾರ್ಥ ಮಾಡಿ ಅವರಿಂದ ಜಯಪತ್ರಿಕೆ ಪಡೆದು ಅವರಿಗೆ ಋಗ್ಭಾಷ್ಯದ ಶುದ್ದ ಪಾಠವನ್ನು ಸರಿಯಾಗಿ ಮಾಡುತ್ತಾರೆ.  ದ್ವೈತಾದ್ವೈತ ಮತ್ತು ಉಪನಿಷದ್ ಪಾಠಗಳನ್ನು ಮಾಡಿ ಅಲ್ಲಿನ ಜನರ ಸಿದ್ದಾಂತದ ಪ್ರಮಾಣವನ್ನು ತೋರಿಸುತ್ತಾರೆ.

## ಸಾಂಗಲಿ ಸತ್ಯವ್ರತ ತೀರ್ಥರ ದರ್ಶನ ಮತ್ತು ಅವರಿಂದ ಪ್ರಶಂಸೆ

ಮಿರಾಜ್ ನಿಂದ ಶ್ರೀ ಸತ್ಯವ್ರತ ತೀರ್ಥರ ಮೂಲ ಸಶರೀರ ವೃಂದಾವನಸನ್ನಿಧಾನಕ್ಕೆ ಬಂದು ಸತ್ಯವ್ರತ ತೀರ್ಥರ ಎದುರಿನಲ್ಲಿ ಮೂಲರಾಮದೇವರ ಪೂಜೆ ಮಾಡುತ್ತಾ ವಿಷ್ಣು ಸಹಸ್ರಮಾಮಕ್ಕೆ ಅರ್ಥಬರೆದ ಮಹಾತ್ಮರು ಪ್ರತಿಯೊಂದು ನಾಮದಲ್ಲಿ ಪರಮಾತ್ಮನ ಚಿಂತಿಸುತ್ತ ಅತಿಭಕ್ತಿಯಿಂದ ಅರ್ಚನೆ  ಪೂಜೆ ಮಾಡುತ್ತಾರೆ. ನಂತರ ಸುಧಾಪಾಠ ತಮ್ಮ ಶಿಷ್ಯರಿಗೆ ಮಾಡುತ್ತಾರೆ. ಒಂದುದಿನ ಪಾಠ ಮಾಡುವಾಗ ಇವರು ಕೊಡುತ್ತಿದ್ದ ಸುಧಾಪಂಕ್ತಿಗೆ ಉತ್ತಮವಾದ ವಿವರಣೆ ಹಾಗೆ ಸುಧೆಗೆ ವಿಶೇಷವಾದ ಅರ್ಥಾನುಸಂಧಾನ ಮಾಡುತ್ತಿದ್ದಗಾ ಬೃಂದಾವನದ ಒಳಗೆ ಕುಳಿತ ಶ್ರೀ ಸತ್ಯವ್ರತ ತೀರ್ಥರು ಇವರ ಪಾಠಕ್ಕೆ ಮೆಚ್ಚಿ ಅಲ್ಲಿಂದಲೇ ಸಶರೀರವಾಗಿ ತಲೆ ಅಲ್ಲಾಡಿಸಿದರೆ, ಅವರ ಬೃಂದಾವನ ಅಲುಗಾಡಿ ಮೇಲಿದ್ದ ವಸ್ತ್ರಗಳು ಮತ್ತು ಹೂಗಳು ಕೆಳಗೆ ಬಿದ್ದವಂತೆ. ಅಲ್ಲಿದ್ದ ಪ್ರತಿಯೊಬ್ಬರೂ ನೋಡುತ್ತಾರೆ. ಸಾಂಗಲಿ ಸಂಸ್ಥಾನದ ಮಹಾರಾಜನಿಗೆ ಈ ವಿಷ್ಯಗೊತ್ತಾಗಿ ಅಲ್ಲಿನ ಮಹಾರಾಜ ಇವರಿಗೆ ವಿಶೇಷ  ಕಾಣಿಕೆಗೊಳನ್ನು ಕೊಟ್ಟು ಇವರ ದಾಸನು ದಾಸನಾಗುತ್ತಾನೆ. ಮುಂದೆ ಕೋಲ್ಹಪುರ ಮಹಾಲಕ್ಷ್ಮಿದರ್ಶನ ಮತ್ತು ವಾದಿಗಳ ನಿಗ್ರಹ ಮಾಡಿ ಅಲ್ಲಿಂದ ಸೊಲ್ಲಾಪುರಕ್ಕೆ ಬಂದು ಅಲ್ಲಿ ಚಾತುರ್ಮಾಸ್ಯಕ್ಕೆ ಕೂರುತ್ತಾರೆ.

## ಸತ್ಯಸಂದ ತೀರ್ಥರಿಗೆ ತುಳುಜಭಾವಾನಿ ದರ್ಶನ ಕೊಟ್ಟಿದ್ದು

ಒಬ್ಬ ಶಿಷ್ಯ ಶ್ರೀ ಸತ್ಯಸಂದ ತೀರ್ಥರಲ್ಲಿ ಬಂದು ತಾನು ತುಳುಜಾಭವಾನಿಯ ದರ್ಶನಕ್ಕೆ ಹೋಗಬೇಕೆಂದು ಮಂತ್ರಾಕ್ಷತೆ ಕೇಳುತ್ತಾನೆ. ಆಗ ಶ್ರೀಸತ್ಯಸಂದ ತೀರ್ಥರು ತುಳುಜಾಪುರಕ್ಕೆ ನಾವು ಹೋಗೋಣ ಚಾತುರ್ಮಾಸ್ಯದ ನಂತರ, ಏಕೆಂದರೆ ಶ್ರೀಮೂಲರಾಮಚಂದ್ರ ದೇವರು ಸೊಲ್ಲಾಪುರದಲ್ಲೇ ಇರಬೇಕಾದರೆ ಶ್ರೀಭೂದುರ್ಗ ಮಹಾಲಕ್ಷ್ಮಿ ಸನ್ನಿಧಾನಳಾದ ತುಳುಜಾಭವಾನಿ ಇಲ್ಲೇ ಬರುತ್ತಾಳೆ ಎಂದು ಹೇಳುತ್ತಾರೆ. ಈಗ ಹೋಗಬೇಡ ಎಂದು ಹೇಳುತ್ತಾರೆ. ಆ ಶಿಷ್ಯ ಇವರ ಮಾತು ಕೇಳದೆ ಇಲ್ಲ ನಮ್ಮ ಕುಲದೇವಿ ದರ್ಶನ ಮಾಡಲೇಬೇಕು ಎಂದು ಹೇಳಿ ಹೊರಟಾಗ ಇದ್ದಕ್ಕಿದ್ದ ಹಾಗೆ ಮಧ್ಯಾಹ್ನ ಸುತ್ತ ಮಂಜು ಕವಿದುಕೊಂಡು ತನ್ನ ಕಣ್ಣುಗಳು ಕಾಣಿಸದಂತಾಗುತ್ತದೆ. ಆಗ ಆ ಶಿಷ್ಯನ ಸ್ವಪ್ನದಲ್ಲೇ ತುಳುಜಭಾವಾನಿ ಪ್ರತ್ಯಕ್ಷಳಾಗಿ ಗುರುಗಳ ಮಾತಿನಲ್ಲಿ ವಿಶ್ವಾಸವಿಲ್ಲಾ ನಿನಗೆ. ಚತುರ್ಯುಗ ಮೂರ್ತಿ ರಾಮಚಂದ್ರ ದೇವರು ಇರುವಾಗ ಶ್ರೀ ಸತ್ಯಸಂದ ತೀರ್ಥರಲ್ಲಿ ನಾನೇ ಅಂತರ್ಗತಳಾಗಿ ರಾಮದೇವರ ಪೂಜೆ ಮಾಡುತ್ತೇನೆ ಎಂದ ಮೇಲೆ ಅಲ್ಲೇ ದರ್ಶನ ಮಾಡಿಕೊಳ್ಳಬೇಕು ಹೊರತು ಇಲ್ಲೇ ಯಾಕೆ ಬಂದೆ ಎನ್ನಲು, ಪುನಃ ನನಗೆ ಕಣ್ಣು ಕೊಡು ಎಂದು ಕೇಳಲು ತುಳುಜಾಭವಾನಿ ಪುನಃ ಶ್ರೀ ಸತ್ಯಸಂದ ತೀರ್ಥರಲ್ಲಿ ಹೋಗು ಮತ್ತು ಅವರ ದರ್ಶನ ಮಾಡಿ ಪುನಃ ಅವರನ್ನೇ ಕೇಳು ಅವರು ಪುನಃ ಕಣ್ಣು ಕೊಟ್ಟರೆ ನಿನಗೆ ಕಣ್ಣು ಬರುತ್ತದೆ ಎಂದು ಹೇಳುತ್ತಾರೆ. ನಂತರ ಆ ಶಿಷ್ಯ ಸತ್ಯಸಂದರಲ್ಲಿ ಪುನಃ ಅಪರಾಧ ಮನ್ನಿಸಬೇಕೆಂದು ಕೇಳಲು ಪುನಃ ಶಿಷ್ಯವಾತ್ಸಲ್ಯದಿಂದ ತೀರ್ಥ ಪ್ರೋಕ್ಷಣೆ ಮಾಡಲು ಪುನಃ ಕಣ್ಣುಗಳು ಬಂದವು. ಮೃತ್ತಿಕೆ ಮಹಿಮೆಯನ್ನು ತೋರಿಸಿ ನಂತರ ತೀರ್ಥದ ಮಹಿಮೆಯನ್ನು ತೋರಿಸಿ ನಂತರ ಮೊದಲು ರಾಮಚಂದ್ರ ದೇವರ ದರ್ಶನ ಮಾಡಿ ಕುಲಸ್ವಾಮಿನಿಯಾದ ತುಳುಜಭವನೀ ದರ್ಶನ ವಾಗಲಿಲ್ಲ ವೆಂದು ಬೇಜಾರು ಮಾಡಿಕೊಂಡ. ಸತ್ಯಸಂದ ತೀರ್ಥರು ಇವನ ಮನಸ್ಸಿನ ಇಚ್ಛೆ ತಿಳಿದು ತುಳುಜಭಾವಾನಿಯನ್ನು ಪ್ರಾರ್ಥಿಸಲು ಅಲ್ಲೇ ಆಕೆ ಪ್ರಾದುರ್ಭಗೊಂಡು ಅಷ್ಟಾದಶಭುಜಗಳಿಂದ ಆಯುಧ ಸಹಿತ ಮಹಾಲಕ್ಷ್ಮಿ ಸ್ವರೂಪಳಾದ ಶ್ರೀ ತುಳುಜಭಾವಾನಿ ಮೂಲರೂಪದಲ್ಲೇ ಶ್ರೀ ಸತ್ಯಸಂದರಿಗೆ ಮತ್ತು ಆ ಶಿಷ್ಯನಿಗೆ ದರ್ಶನ ಕೊಟ್ಟಳು. ನಂತರ ಅಲ್ಲಿಂದ ತುಳುಜಾಪುರಕ್ಕೆ ಹೋಗಿ ತಾವು ದರ್ಶನ ಮಾಡಿ ಅಲ್ಲಿಂದ ಗಯಾಕ್ಷೇತ್ರಕ್ಕೆ ಸಂಚಾರ ಮಾಡುತ್ತಾರೆ.

## ಗಯಾದಿಗ್ವಿಜಯ

ಮಾರ್ಗಮಧ್ಯದಲ್ಲಿ ಅನೇಕ ವಾದಿಗಳ ನಿಗ್ರಹ, ಅಲ್ಲಿಂದ ಕಾಶಿಗೆ ಪ್ರಯಾಣ, ಕಾಶಿಗೆ ಯಾವ ಮಧ್ವಪೀಠಾಧಿಪತಿಗಳು ಹೋದರು ವಾಕ್ಯಾರ್ಥ ಆಗಿನ ಪ್ರಖಾಂಡ ಪಂಡಿತರಾದ ಬಾಲಸ್ವಾಮಿ ಮುಂತಾದ ಪಂಡಿತರ ಜೊತೆ ವಾಕ್ಯಾರ್ಥ ದ್ವೈತಾದ್ವೈತ ವಿಚಾರಮಾಡಿ ಮಧ್ವಮತಸಿದ್ಧಾಂತ ಸ್ಥಾಪನೆ ಮಾಡಿ ಅಲ್ಲಿಂದ ಮುಂದೆ ಗಯಾಕ್ಷೇತ್ರಕ್ಕೆ ಹೋಗುತ್ತಾರೆ. ಹಿಂದೆ ಶ್ರೀ ವಿದ್ಯಾಧೀಶ ತೀರ್ಥರ ಕಾಲದಲ್ಲಿಯಿದ್ದ ಉತ್ತಾರಾದಿ ಮಠಕ್ಕೆ ನೀಡುತ್ತಿದ್ದ ಗೌರವ ಎಲ್ಲವು ತಪ್ಪಿಹೋಗಿರುತ್ತದೆ. ಬಹಳಷ್ಟು ಮಧ್ಯೆ ಯಾವಾ ಯತಿಗಳು ಹೋಗದ ಕಾರಣ ಗಾಯವಾಡರು ಇವರಿಗೆ ದರುಶನ ಕೊಡದೆ ದೇವಾಲಯದ ಬಾಗಿಲು ತೆರೆಯುವುದಿಲ್ಲ. ಆಗಿನ ಕಾಲಕ್ಕೆ ಹದಿನೈದು ಸಾವಿರ ಕೊಡಬೇಕೆಂದು ಕೇಳಿದಾಗ. ಶ್ರೀ ಸತ್ಯಸಂದ ತೀರ್ಥರು ನೀವೇ ಅಷ್ಟು ದಕ್ಷಿಣೆಯನ್ನು ರಾಮಚಂದ್ರ ದೇವರ ಮುಂದೆ ಸುರಿಯಬೇಕು ಎಂದು ಹೇಳಿ. ನೀವು ಶ್ರೀಮಠಕ್ಕೆ ವಿದ್ಯಾಧೀಶ ತೀರ್ಥರು ಮಾಡಿಕೊಟ್ಟ ಪರಂಪರೆಗೆ ನೀವು ಇಂದು ಬೆಲೆ ನೀಡುತ್ತಿಲ್ಲ, ನಿಮಗೆ ಬೇಕಾದರೆ ಅದರ ಎರಡರಷ್ಟು ದಕ್ಷಿಣೆ ಕೊಡುತ್ತೇವೆ ಎಂದು ಹೇಳಿ ಮೊದಲು ಶ್ರೀಮಠಕ್ಕೆ ಗೌರವ ಕೊಡಬೇಕು ಎಂದು ಹೇಳಿ, ಹೊರಗಿನಿಂದಲೇ "ವಿಷ್ಣು ಪಾದ"ಸ್ತುತಿ ಮಾಡುತ್ತಾರೆ. ಇವರ ಭಕ್ತಿಗೆ ಮೆಚ್ಚಿದ ಪರಮಾತ್ಮ ಕೊಡಲೇ ಬೀಗಗಳು ತಾವಾಗಿಯೇ ಮುರಿದು ಬೀಳುತ್ತದೆ. ಗಯಾವಾಡರು ದಿಗ್ಭ್ರಾಂತರಾಗಿ ಇವರಲ್ಲಿ ಶರಣಾಗಿ ಗೌರವ ಕೊಟ್ಟು ತಾವೇ ಹದಿನೈದು ಸಾವಿರ ಕೊಟ್ಟು ನಾವೇ ನಿಮ್ಮ ದಾಸರಾಗಿ ಇವತ್ತಿನಿಂದ ನಿಮ್ಮ ಮಠದ

ಅನುಯಾಯಿಗಳು ಎಂದು ಹೇಳಿ ಶರಣಾದರು. ಅಂದಿನಿಂದ ಇಂದಿನವರೆಗೂ ಉತ್ತರಾದಿ ಮಠದ ಮತ್ತು ಮಾಧ್ವ ಪರಂಪರೆಯ ಯಾವ ಯತಿಗಳು ಹೋದರು ಅವರಿಗೆ ವಿಶೇಷ ಮರ್ಯಾದೆ ಮತ್ತು ಮೊದಲ ಪೂಜೆ ಅವರಿಗೆ. ಜೊತೆಗೆ ಉತ್ತರಾಧಿ ಮಠದ ಯತಿಗಳಿಗೆ ವಿಷ್ಣುಪಾದದ ಪಕ್ಕದಲ್ಲೇ ಶ್ರೀ ರಾಮಚಂದ್ರ ದೇವರ ಪೂಜೆ ನಡೆಸುವ ಅಧಿಕಾರ ದೊರಕಿಸಿಕೊಟ್ಟರು. ಅಲ್ಲಿಂದ ಮುಂದೆ ಹೋಗಬೇಕಾದರೆ ಬಿಹಾರ ಪ್ರಾಂತ್ಯದಲ್ಲಿ ಕಳ್ಳರ ದಂಡು ಬಂದು ಇವರನ್ನು ಮುತ್ತಿಗೆ ಹಾಕಬೇಕು ಎಂದು ನಿರ್ಧರಿಸಿ ಬರಲು ಶ್ರೀ ಮಠದ ಸಂಪ್ರಾದಾಯದಂತೆ ರಾತ್ರಿ ಎಷ್ಟು ಹೊತ್ತಾದರೂ ಏಕಾದಶಿ ಹೊರತು ಮತ್ತೆಲ್ಲ ದಿನಗಳು ಒಂದು ಕೊಳಗ ಹುಳಿ ಮತ್ತು ಅನ್ನವನ್ನು ಮಾಡುವ ಪದ್ದತಿ. ಬಂದಂತಹ ಕಳ್ಳರ ಗುಂಪಿಗೆ ಶ್ರೀ ಸತ್ಯಸಂದ ತೀರ್ಥರು ಉಪಚಾರ ಮಾಡಿ ಊಟ ಹಾಕಿದರು. ಶ್ರೀ ರಾಮದೇವರ ಪ್ರಸಾದದ ಮಹಿಮೆಯಿಂದ ಆ ಪವಿತ್ರ ನೈವೇದ್ಯ ಸ್ವೀಕಾರ ಮಾಡಿದ ತಕ್ಷಣ ಅವರ ದುರ್ಗುಣ ಸುಟ್ಟು, ಶ್ರೀ ಸತ್ಯಸಂದ ತೀರ್ಥರಲ್ಲಿ ಶರಣಾದರು.

### ಆಂಧ್ರಪ್ರದೇಶ ದಿಗ್ವಿಜಯ ಸುವರ್ಣ ಪುರಿ ನಿರ್ಮಾಣ (ಸೋನ್ ಕ್ಷೇತ್ರ)

ಅಲ್ಲಿಂದ ಪುನಃ ಬರುವಾಗ ಆಂಧ್ರ ಪ್ರದೇಶದ ವಿಶಾಖ ಪಟ್ಟಣ, ವಿಜಯನಗರಂ, ಶ್ರೀಕಾಕುಳಂ, ನರಹರಿತೀರ್ಥರಿಂದ ಪ್ರತಿಷ್ಠಿತವಾದ ರಾಂಮದೇವರ ದರ್ಶನ , ಶ್ರೀಕೂರ್ಮಕ್ಷೇತ್ರ ದರ್ಶನ ಅಲ್ಲಲ್ಲಿ ಪ್ರಾಣದೇವರ ಪ್ರತಿಷ್ಠೆ, ವೈಷ್ಣವ ದೀಕ್ಷೆ, ಮಧ್ವಮತ ಪ್ರಚಾರ, ರಾಜ ಮಹೇಂದ್ರಿಯಲ್ಲಿ, ಮಚಲಿಪಟ್ಟಣ, ವಿಜಯವಾಡದಲ್ಲಿ ದೊಡ್ಡ ಮುಖ್ಯಪ್ರಾಣದೇವರ ಪ್ರತಿಷ್ಠೆ ಮಾಡಿದರು. ಆಗಿನ ಕಾಲದಲ್ಲಿ ಸಾವಿರಾರು ಎಕ್ಕರೆ ಜಮೀನುಗಳು ದತ್ತಿಯಾಗಿ ಕೊಟ್ಟಿದ್ದರು. ಆವುಗಳು ಇಂದಿಗೂ ಕೆಲವೊಂದು ಜಮೀನುಗಳು ಶ್ರೀ ಸತ್ಯಸಂದ ತೀರ್ಥರ ಹೆಸರಿನಲ್ಲಿ ಇವೆ ಎಂದು ಹೇಳುತ್ತಾರೆ. ಆಗಿನ ಕಾಲದಲ್ಲಿ ಮಾಡಿದ ಸಾಧನೆಗಳು ಮುಸ್ಲಿಮರ ಆಳ್ವಿಕೆಯಲ್ಲಿ ಇಷ್ಟು ಪಡೆದದ್ದು ಮಹತ್ವವಾದದ್ದು. ಗಂಗಾದೇವಿ ಪ್ರತ್ಯಕ್ಷಕರಿಸಿಕೊಂಡ ಮಹಾನುಭಾವರು ಶ್ರೀ ಸತ್ಯಸಂದ ತೀರ್ಥರು ಮತ್ತು ಶ್ರೀ ಸತ್ಯಸಂದ ತೀರ್ಥರರಿಂದ ಬಂಗಾರದ ಮರದ ಭಾಗಿನ ತೆಗೆದುಕೊಂಡ ಗಂಗಾದೇವಿ. ಅಲ್ಲಿಂದ ಮುಂದೆ ರಾಮಚಂದ್ರ ದೇವರು ವನವಾಸ ಮಾಡಿದ ಸ್ಥಳ ಗೋದಾವರಿ ತೀರಾ, ವೃದ್ದಗಂಗಾ ಕ್ಷೇತ್ರ ಸುವರ್ಣಪುರಿ ಸಾಲಿಗ್ರಾಮ ಕ್ಷೇತ್ರ ಪರಶುರಾಮರು ಯಜ್ಞ್ಯ ಮಾಡಿದ ಸ್ಥಳ ಎಂಬಲ್ಲಿ ಒಂದು ಅಗ್ರಹಾರ ನಿರ್ಮಿಸಿದರು. ಈಗಲೂ ಅಲ್ಲಿ ನೂರಕ್ಕಿಂತ ಹೆಚ್ಚು ಮಾಧ್ವ ಕುಟುಂಬಗಳು ಇವೆ ಎಂದರೆ ಇನ್ನು ಆಗಿನ ಕಾಲದಲ್ಲಿ ಎಸ್ಟಿತೆಂಬುದು ಊಹಿಸಲು ಅಸಾಧ್ಯ. ಅಲ್ಲಿ ಮುಖ್ಯಪ್ರಾಣದೇವರ ಪ್ರತಿಷ್ಠೆ ಮತ್ತು ಶ್ರೀ ವೆಂಕಟೇಶದೇವರ ಪ್ರತಿಷ್ಠೆ ಮಾಡಿ ಸ್ವಲ್ಪ ದಿನಗಳು ಅಲ್ಲೇ ಉಳಿದಿದ್ದರು. ನಂತರ ಚನ್ನಪಟ್ಟಣ, ಶ್ರೀರಂಗಪಟ್ಟಣ ಮುಂತಾದ ಕಡೆಗಳಲ್ಲಿ ಅಪಾರ ಮಹಿಮೆ ಮತ್ತು ಗಂಗಾಸನ್ನಿದಾನ ತರಿಸಿದ್ದವರು.

ಒಮ್ಮೆ ಶ್ರೀ ರಾಮಚಂದ್ರ ದೇವರ ಪೂಜೆ ಮಾಡಲು ಪುಷ್ಪಗಳೇ ಸಿಗದಿದ್ದಾಗ ಎಷ್ಟೇ ಪ್ರಯತ್ನ ಪಟ್ಟರು ಹೂಗಳು ಸಿಗಲಿಲ್ಲ ಹಾಗೆ ಯೋಚನೆ ಮಾಡುತ್ತಿದ್ದಾಗ ಶ್ರೀ ರಾಮಚಂದ್ರ ದೇವರು ಒಬ್ಬ ವೃದ್ದ ಬಂದು ಗುರುಗಳಿಗೆ ಸಮರ್ಪಣೆ ಮಾಡಿಸಿದರು. ಹೀಗೆ ಪೂಜೆ ಮಾಡುವಾಗ ಇದ್ದ ಐದು ಹೂಗಳನ್ನು ಶ್ರೀ ಮೂಲ ರಾಮಚಂದ್ರ ದೇವರು,ದಿಗ್ವಿಜಯರಾಮ ದೇವರು, ವೇದವ್ಯಾಸದೇವರು, ವಂಶರಾಮಚಂದ್ರ ದೇವರು ಮತ್ತು ವಿಠಲ ದೇವರಿಗೆ ಏರಿಸಿದರೆ, ಸೀತಾದೇವಿಗೆ ಹೂವೆ ಇರುವುದಿಲ್ಲ. ಮನಸಿನಲ್ಲೇ ಒಂದು ಚೂರು ಸಂಕೋಚಗೊಂಡರಂತೆ, ತಕ್ಷಣ ರಾಮ ದೇವರು ಇವರ ಮನಸ್ಸನ್ನು ಅರಿತು ತಕ್ಷಣ ಮೂಲರಾಮದೇವರ ಮೇಲಿದ್ದ ಹೂವು ತಕ್ಷಣ ಸೀತಾದೇವಿಯ ಮೇಲೆ ಬಂದು ಕೂರುತ್ತದೆ. ಇದೆ ಇವರ ಪೂಜಾ ಮಹಿಮಾ.

### ಪಾಂಡುರಂಗ ಶ್ರೀ ಸತ್ಯಸಂದ ತೀರ್ಥರಿಂದಲೇ ಮುದ್ರಾಧಾರಣೆ ಮಾಡಿಸಿಕೊಂಡಿದ್ದು

ಒಮ್ಮೆ ಸಂಚಾರ ಕ್ರಮದಲ್ಲಿ ಶ್ರೀ ಸತ್ಯಸಂದ ತೀರ್ಥರು ಪಂಡರಪುರಕ್ಕೆ ಹೋಗಿದ್ದಾಗ ಅಲ್ಲಿನ ವೈಷ್ಣವರಿಗೆ ಮುದ್ರಾಧಾರಣೆ ಮಾಡಿದರು. ಒಬ್ಬ ಮುದುಕನ ಬಂದು ಇವರಿಂದ ನಾನು ವೃದ್ದ ನನಗೆ ಪಂಡರ ಪುರಕ್ಕೆ

ಹೋಗಿ ಮುದ್ರೆ ತೆಗೆದುಕೊಳ್ಳುವಷ್ಟು ಆಗುವುದಿಲ್ಲ. ನನಗೆ ಇಲ್ಲೇ ಮುದ್ರೆ ಕೊಡಿ ಎಂದು ಕೇಳಿದನು. ಸತ್ಯಸಂಧರು ಅಲ್ಲೇ ಮುದ್ರಾಧಾರಣೆ ಮಾಡಿದರು. ಆ ವ್ಯಕ್ತಿ ಅಲ್ಲಿಂದ ಅದೃಶ್ಯನಾಗಿ ಹೋಗುತ್ತಾನೆ. ನಂತರ ಶ್ರೀ ಸತ್ಯಸಂದ ತೀರ್ಥರು ಪಂಢರಪುರಕ್ಕೆ ಬಂದು ವಿಠಲನ ದರ್ಶನ ಮಾಡಲು ಇವರಿಂದ ಪಂಚ ಮುದ್ರೆ ಸ್ವೀಕರಿಸಿದ ವಿಠಲನ ಎದೆಯಲ್ಲಿ ಮುದ್ರೆಗಳು ಕೆಂಪಗೆ ರಾರಾಜಿಸುತ್ತದೆ. ಇದರ ಅಂತಾರ್ಯ ವೈಷ್ಣವ ಮುದ್ರೆಯನ್ನು ಸಾಕ್ಷಾತ್ ಭಗವಂತನೇ ಸ್ವೀಕರಿಸಿ ತೋರಿಸಿದ ಎಂದಮೇಲೆ ನಾವೆಲ್ಲರೂ ಖಂಡಿತ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕು. ಹಂಸನಾಮಕಪರಮಾತ್ಮನಿಂದಲೇ ವಿಠಲ ಸ್ವೀಕಾರ ಮಾಡಿದನು ಎಂದೇ ತಿಳಿಯಬೇಕು. ತಾವು ಮೊದಲೇ ಪೂರ್ವಾಶ್ರಮದಲ್ಲೇ ವಿಠಲನ ದರ್ಶನ ಮಾಡಿದ್ದವರು. ಕೆಲವುದಿನ ಉಡುಪಿಯಲ್ಲೇ ತಂಗಿ ಅಲ್ಲಿ ಕೃಷ್ಣನ ಸನ್ನಿದಿಯಲ್ಲಿ ಶಾಸ್ತ್ರಾರ್ಥವಿಚಾರ ವಿದ್ವತ್ ಘೋಷ್ಟಿ ಎಲ್ಲವು ನಡೆಯುತ್ತದೆ. ಅಲ್ಲಿಂದ ಉತ್ತರಾದಿಮಠ ಮತ್ತು ಉಡುಪಿಯ ಅಷ್ಟಮಠಗಳ ಬಾಂದವ್ಯ ಹೆಚ್ಚಾಗುತ್ತದೆ.

ಹೀಗೆ ಸ್ವತಃ ಶ್ರೀ ಸತ್ಯಸಂದ ತೀರ್ಥರಿಗೆ ತಮ್ಮ ಆಯುಷ್ಯ ಇನ್ನು ಹದಿನೈದು ದಿನವಿರುವುದು ಮೊದಲೇ ತಿಳಿದಿರುತ್ತದೆ, ಉಡುಪಿಯಲ್ಲೇ ಹನ್ನೆರಡು ದಿನಗಳು ಕಳೆದ ನಂತರ ಅಲ್ಲಿಂದ ತಮ್ಮ ಶಿಷ್ಯರಿಗೆ ಬೇಗ ಹೊರಡಲು ಹೇಳಿ ಅಲ್ಲಿಂದ ಮುಂದೆ ಸೀತಾನದಿಯ ತೀರಕ್ಕೆ ಬರುತ್ತಾರೆ ಅಷ್ಟರಲ್ಲೇ ದೆಹಾಲಾಸ್ಯ ತುಂಬಾ ಆಗಿರುತ್ತದೆ. ತಮ್ಮ ಶಿಷ್ಯರಲ್ಲಿ ಒಬ್ಬರಾದ ಶ್ರೀ ಹಾವೇರಿ ಕೃಷ್ಣಚಾರ್ಯರಿಗೆ ಸನ್ಯಾಸಶ್ರಮ ಕೊಟ್ಟು ಸತ್ಯವರ ತೀರ್ಥರು ಎಂದು ಆಶ್ರಮ ನಾಮ ಕೊಟ್ಟು, ಇನ್ನು ನಾವು ಯೋಗ ಸಾಮರ್ಥ್ಯದಲ್ಲಿ ಇರುವೆವು ನಮ್ಮ ದೇಹ ಅತಿ ಹಗುರ ವಾಗಿರುತ್ತದೆ ಮತ್ತು ರಾಮ ದೇವರು ಅಶ್ವತ್ಥ ನಾರಾಯಣ ಪ್ರತಿಷ್ಠೆ ಮಾಡಿದ ಸ್ಥಳದ ಹತ್ತಿರದಲ್ಲಿ ನಮ್ಮ ದೇಹ ಭಾರವಾದಾಗ ಅದೇ ಸ್ಥಳದಲ್ಲಿ ವೃಂದಾವನ ನಿರ್ಮಾಣ ಮಾಡಬೇಕೆಂದು ತಮ್ಮ ಶಿಷ್ಯರು ಶ್ರೀ ಸತ್ಯವರ ತೀರ್ಥರಿಗೆ ಹೇಳಿ ಪರಮಾತ್ಮನ ಧ್ಯಾನಕ್ಕೆ ಕುಳಿತು ಕೊಳ್ಳುತ್ತಾರೆ. ಜೇಷ್ಠ ಮಾಸದ ಬಿಸಿಲಿದ್ದರೂ ಇವರು ಸಂಚಾರ ಮಾಡುತಿದ್ದ ಸಮಯದಲ್ಲಿ ತಂಪಾದ ಮೋಡಗಳು ಇವರ ಜೊತೆ ಚಲಿಸುತ್ತಿದ್ದವಂತೆ. ಹೀಗೆ ಜೇಷ್ಠ ಶುದ್ದ ದ್ವಿತೀಯದಂದು ಮಧ್ಯಾನ್ಹ ಮಹಿಷಿ ಕ್ಷೇತ್ರದಲ್ಲಿ ತಮ್ಮ ದೇಹತ್ಯಾಗ ಮಾಡಿ ಪರಮಾತ್ಮನಲ್ಲಿ ಲೀನಾವಾಗುತ್ತಾರೆ.

ಹೀಗೆ ಶ್ರೀ ಸತ್ಯಸಂದ ತೀರ್ಥರ ವಿಷಯಗಳನ್ನು ತಿಳಿಯುತ್ತ ಹೋದರೆ ಅವರ ಮಹಿಮೆಗಳನ್ನು ತಿಳಿಯಲು ಸಾಧ್ಯವೇ ಇಲ್ಲ. ಇವರ ಕೃತಿಗಳಾದ ವಿಷ್ಣು ಸ್ತುತಿ ಮತ್ತು ವಿಷ್ಣು ಸಹಸ್ರಮಾಮ ಭಾಷ್ಯದಲ್ಲಿ ಪರಮಾತ್ಮನ ಭಜಿಸಿದ ಒಂದೊಂದು ನುಡಿಗಳು ಪರಮಾದ್ಭುತ. ಹೀಗೆ ಸತ್ಯಸಂದ ವಿಜಯದಲ್ಲಿ ಸೂಮಾರು 564 ಶ್ಲೋಕಗಳಲ್ಲಿ ವರ್ಣಿಸಿದ್ದಾರೆ.

ಹೀಗೆ ಹಲವಾರು ಮಹಿಮೆಗಳನ್ನು ತೋರಿಸಿ ಭಕ್ತರಿಗೆ ನಿತ್ಯ ಅನುಗ್ರಹ ಮಾಡುತ್ತಾ ಪ್ರಕೃತಿ ಸೌಂದರ್ಯದ ನಡುವೆ ತುಂಗಾನದಿ ತೀರದಲ್ಲಿ ಅಶ್ವಥ ಲಕ್ಷ್ಮಿ ನಾರಸಿಂಹ ಮತ್ತು ನಾರಾಯಣನ ಸೇವೆ ಮಾಡುತ್ತಾ ಶ್ರೀ ಸತ್ಯಸಂದ ತೀರ್ಥರು ವಿರಾಜಿಸುತ್ತಿದ್ದರೆ. ಅವರ ತೀರ್ಥ ಮತ್ತು ಮೃತ್ತಿಕೆಯ ಮಹಿಮೆಗಳು ಅಪಾರ. ಸಾಧ್ಯವಾದರೆ ಒಮ್ಮೆ ಅವರ ದರುಶನ ಮಾಡಿದರು ಜನ್ಮ ಸಾರ್ಥಕ. ಶ್ರೀ ಸತ್ಯಸಂದ ತೀರ್ಥರಂತರ್ಗತ ಭಾರತಿರಮಣ ಮುಖ್ಯಪ್ರಾಣಂತರ್ಗತ ಶ್ರೀ ವೇದವ್ಯಾಸದೇವರ ಚರಣಕಮಲಗಳಿಗೆ ಈ ಪುಟ್ಟ ಲೇಖನ ಪುಷ್ಪಸಮರ್ಪಿಸುತ್ತಿದ್ದೇನೆ. ದೋಷಗಳೇನಿದ್ದರೂ ಅದು ನನ್ನದೇ ಮತ್ತು ಒಂದೆರಡು ಒಳ್ಳೆಯ ವಿಚಾರಗಳಿದ್ದರು ಅದು ಸತ್ಯಸಂದ ತೀರ್ಥರ ಅನುಗ್ರಹ

ಶ್ರೀ ಕೃಷ್ಣಾರ್ಪಣಮಸ್ತು